‘ಭಯ ತುಂಬಿದ ವಾತಾವರಣ’ದ ಪರಿಣಾಮ ಹಾಗೂ ಒತ್ತಡಗಳು ದೀರ್ಘಕಾಲದಲ್ಲಿ ತುಂಬಾ ತೀವ್ರವಾಗುತ್ತವೆ. ಒತ್ತಡವು ದೇಹ ಹಾಗೂ ಮೆದುಳಿಗೆ ಒಳ್ಳೆಯದಲ್ಲ. ಅಂತೆಯೇ, ಶೈಕ್ಷಣಿಕ ಸಾಧನೆಗೂ ಹಾನಿಕಾರಕ. ಶಾಲಾ ಶಿಕ್ಷಣವು ಕಲಿಕೆ ಮತ್ತು ಸಕಾರಾತ್ಮಕವಾದ ಭಾವನಾತ್ಮಕ ಅನುಭವಗಳನ್ನು ಒದಗಿಸುವುದರ ನಡುವೆ ಸಮತೋಲನವನ್ನು ಸಾಧಿಸುವ ಅಗತ್ಯವಿದೆ...

–ಕಮಲಾ.ವಿ.ಮುಕುಂದ

ದೈಹಿಕ ಶಿಕ್ಷೆಯ ವಿರುದ್ಧ ಸಮರ

ಶೈಕ್ಷಣಿಕ ಸಾಧನೆಯನ್ನು ಉತ್ತಮಪಡಿಸುವ ಹಾದಿಯಲ್ಲಿ ತೆಗೆದುಕೊಳ್ಳಲಾದ ಅಸಹನೀಯ ಕ್ರಮಗಳು ಮಕ್ಕಳ ಘನತೆಯನ್ನು ಉಲ್ಲಂಘಿಸುತ್ತಿಲ್ಲವಷ್ಟೇ? ಮಕ್ಕಳನ್ನು ಶಾಲೆಯಲ್ಲಿ ಹೇಗೆ ನಡೆಸಿಕೊಳ್ಳಲಾಗುತ್ತಿದೆ ಎನ್ನುವ ವಾಸ್ತವಿಕ ಸ್ಥಿತಿಯೊಂದಿಗೆ ಈ ಪ್ರಶ್ನೆಯನ್ನು ಅವಲೋಕಿಸಬೇಕಾಗಿದೆ.

ಮಕ್ಕಳನ್ನು ಶಾಲೆಯಲ್ಲಿ ಹೇಗೆ ನಡೆಸಿಕೊಳ್ಳಲಾಗುತ್ತದೆ ಎನ್ನುವ ಕುರಿತಾದ ಒಂದು ವಾಸ್ತವಿಕ ಚಿತ್ರಣ

ಇತ್ತೀಚೆಗೆ ನಾವು ಆಯೋಜಿಸಿದ ಕಾರ್ಯಾಗಾರವೊಂದರಲ್ಲಿ ಆನೇಕಲ್ ತಾಲೂಕಿನ ಸರ್ಕಾರಿ ಶಾಲೆಯ ಶಿಕ್ಷಕರೊಡನೆ ಒಡನಾಡುವ ಸಂದರ್ಭ ನನಗೆ ಒದಗಿಬಂದಿತ್ತು. ಅವರು ತಮ್ಮ ಶಾಲೆಗಳಲ್ಲಿ ಇನ್ನಿತರ ಕೆಲವು ವಿಷಯಗಳ ಜೊತೆಗೆ ಪ್ರಾಥಮಿಕ ಹಂತದಲ್ಲಿ ಕನ್ನಡ ಭಾಷೆಯನ್ನು ಕಲಿಸುತ್ತಿದ್ದರು. ಅವರು ತಮ್ಮದೇ ಆದ ಅಭ್ಯಾಸಗಳ ಮೇಲೆ, ನಿರ್ದಿಷ್ಟವಾಗಿ ತಮ್ಮ ತರಗತಿಗಳು ಮಕ್ಕಳಿಗೆ ಭಾವನಾತ್ಮಕ ಸುರಕ್ಷತೆಯನ್ನು ಒದಗಿಸುತ್ತಿವೆಯೇ ಎಂಬುದರ ಬಗ್ಗೆ ಆಲೋಚಿಸಲು ಅನುಕೂಲವಾಗುವಂತೆ ಅಧಿವೇಶನವೊಂದನ್ನು ನಾನು ನಡೆಸಿಕೊಡುತ್ತಿದ್ದೆ. ಚರ್ಚೆಯು ದೈಹಿಕ ಶಿಕ್ಷೆಯ ಕುರಿತಂತೆ ಅವರು ಹೊಂದಿರುವ

ಅವರದೇ ಆದ ನಂಬಿಕೆಯತ್ತ ಹೊರಳಿತು. ಬಹುಬೇಗನೆ ಅದರಿಂದ ಅನೇಕ ಸಂಗತಿಗಳು ಹೊರಬಂದವು.

ಅವರು ತಮ್ಮ ವಿದ್ಯಾರ್ಥಿಗಳನ್ನು ಶಿಸ್ತಿನಲ್ಲಿ ಇಡಲು ದೈಹಿಕ ಶಿಕ್ಷೆಯನ್ನು ಬಳಸುತ್ತಾರೆಯೇ ಎಂಬ ಪ್ರಶ್ನೆ ಎದ್ದಾಗ ಮೊದಮೊದಲಿಗೆ ಅವರು ನಿಸ್ಸಂದೇಹವಾಗಿಯೂ ಅದರ ಇರುವಿಕೆಯನ್ನೇ ಅಲ್ಲಗಳೆದರು. ರಾಜಕೀಯ ದೃಷ್ಟಿಕೋನದಿಂದ ಸರಿಯೆಂಬಂತಹ ನಯವಾದ ಉತ್ತರವನ್ನೇ ಕೊಟ್ಟರು. ಚರ್ಚೆಯನ್ನು ಇನ್ನಷ್ಟು ಆಳಕ್ಕೆ ಒಯ್ದಾಗ ಅವರು ಅದಕ್ಕೆ ವಿರುದ್ಧವಾದ ವಾದವನ್ನು ಮುಂದಿಟ್ಟರು. ಮಕ್ಕಳಿಗೆ ಆಗೀಗ ದೈಹಿಕ ಶಿಕ್ಷೆ ನೀಡದೆ ಕಷ್ಟಕರವಾದ ತರಗತಿಗಳನ್ನು ನಿಭಾಯಿಸಲು ಯಾರಿಗೂ ಸಾಧ್ಯವಿಲ್ಲ ಎಂಬುದು ಅವರ ಅಭಿಪ್ರಾಯವಾಗಿತ್ತು. ಮಕ್ಕಳಿಗೆ ಹೊಡೆಯಲು ಬೆತ್ತದ ಉಪಯೋಗ ಅಥವಾ ಮೌಖಿಕ ದಂಡನೆಯನ್ನು (ಪದೇಪದೇ ಎಚ್ಚರಿಕೆ ನೀಡುವುದು, ಬಯ್ಯುವುದು ಇತ್ಯಾದಿ) ಅವರು ಸಮರ್ಥಿಸಿಕೊಂಡರು. ಮಕ್ಕಳ ಮನೆಯ ಪರಿಸರವು ಶೈಕ್ಷಣಿಕವಾಗಿ ಪ್ರತಿಕೂಲವಾಗಿದೆ, ಇಂತಹ ಮಕ್ಕಳು ಸಾಕಷ್ಟು 'ಕಲಿಕೆಯ ಸಮಯ' ವನ್ನು ಹೊಂದಿರುವುದಿಲ್ಲ. ಆದರೂ ನಿರೀಕ್ಷಿತ ಕಲಿಕೆಯ ಮಟ್ಟವನ್ನು ಮುಟ್ಟುವಂತೆ ಮಾಡಬೇಕು ಎನ್ನುವ ಜವಾಬ್ದಾರಿಯು ಶಿಕ್ಷಕರ ಮೇಲೆ ಹೆಚ್ಚುತ್ತಿದೆ. ಆದ್ದರಿಂದ, ದೈಹಿಕ ಶಿಕ್ಷೆ ನೀಡಬೇಕಾಗುತ್ತದೆ ಎಂದು ಅವರು ಭಾವಿಸಿದ್ದರು. ಶೈಕ್ಷಣಿಕವಾಗಿ ಹಿಂದುಳಿದಿರುವ ಮಕ್ಕಳ ಮೇಲೆ ಸಮಯವನ್ನು ವ್ಯಯಿಸಲು ಶಿಕ್ಷಕರಿಗೆ ಸಾಧ್ಯವೇ ಇಲ್ಲದ ಸನ್ನಿವೇಶವಿದೆ. ಪಠ್ಯಕ್ರಮವೂ ನಿರಂತರವಾಗಿ ಹೆಚ್ಚುತ್ತಲೇ ಹೋಗುತ್ತದೆ. ಜೊತೆಜೊತೆಗೇ ಹಲವಾರು ಆಡಳಿತಾತ್ಮಕ ಕೆಲಸಕಾರ್ಯಗಳನ್ನೂ ನಿರ್ವಹಿಸಬೇಕಾದ ಪರಿಸ್ಥಿತಿಯಿದೆ. ಇಂತಹ ಸಂದರ್ಭದಲ್ಲಿ ಶಿಕ್ಷಣ ಇಲಾಖೆಯ ಅಸಂಖ್ಯಾತ ಮೇಲ್ವಿಚಾರಕರು ಕಲಿಕೆಯ ಪರಿಣಾಮದ ಬಗ್ಗೆ ಅಸೂಕ್ಷ್ಮತೆಯಿಂದ ಪ್ರಶ್ನಿಸುತ್ತಾರೆ. ಅವರ ನಡವಳಿಕೆಯು ಅದಾಗಲೇ ಇರುವ ಶಿಕ್ಷಕರ ನೋವನ್ನು ಇನ್ನಷ್ಟು ಹೆಚ್ಚಿಸಿದೆ.

ಈ ಅನುಭವ ಸಾಲದೇನೋ ಎಂಬಂತೆ, ಇತ್ತೀಚೆಗೆ ಸರ್ಜಾಪುರ ಕ್ಲಸ್ಟರ್‌ನಲ್ಲಿ ಒಳಪ್ರದೇಶದಲ್ಲಿರುವ ಶಾಲೆಗಳಲ್ಲೊಂದಕ್ಕೆ ಹೋದಾಗ, ಅಲ್ಲಿನ ಕ್ರಿಯಾಶೀಲ ಹಾಗೂ ಪ್ರಗತಿಪರ ಮುಖ್ಯೋಪಾಧ್ಯಾಯಿನಿಯೊಬ್ಬರನ್ನು (ಆಶ್ಚರ್ಯಕರವಾದದ್ದೇನೆಂದರೆ, ಅವರು ಇನ್ನೂ ಕೇವಲ ಉಸ್ತುವಾರಿ ಶಿಕ್ಷಕಿಯಾಗಿದ್ದರು!) ಭೇಟಿಯಾದೆ. ಅವರು ಸ್ಥಳೀಯ ಪಂಚಾಯತ್ ಹಾಗೂ ಸಮುದಾಯಗಳಿಂದ ತಮ್ಮ ಶಾಲೆಗೆ ವಿವಿಧ ರೀತಿಯ ಸಂಪನ್ಮೂಲಗಳನ್ನು ಕ್ರೋಡೀಕರಿಸುವಲ್ಲಿ ಅಗಾಧ ಉಪಕ್ರಮಗಳನ್ನು ಕೈಗೊಂಡಿದ್ದಾರೆ. ಅವುಗಳೆಂದರೆ ಹೆಚ್ಚುವರಿ ತರಗತಿ ಕೋಣೆಗಳು, ಶಾಲಾ ಆವರಣದ ಗೋಡೆ, ಬೆಳಗಿನ ಪ್ರಾರ್ಥನೆ ಹಾಗೂ ಸಹಪಠ್ಯ ಚಟುವಟಿಕೆಗಳನ್ನು

ನಡೆಸಲು ಹೊಸದಾಗಿ ಕಾಂಕ್ರೀಟ್ ಹಾಕಿಸಿದ ನೆಲ (ಮಳೆ ಬಂದಾಗ ನೆಲ ಕೆಸರಾಗುವುದನ್ನು ತಪ್ಪಿಸಲು), ಕುಡಿಯುವ ನೀರಿನ ವ್ಯವಸ್ಥೆ, ಹೆಣ್ಣು–ಗಂಡು ಮಕ್ಕಳಿಗೆ ಯೋಗ್ಯವಾದ ಪ್ರತ್ಯೇಕ ಶೌಚಾಲಯಗಳು, ಗಿಡಮರಗಳನ್ನು ನೆಟ್ಟು ಬೆಳೆಸುವುದರ ಮೂಲಕ ಶಾಲಾ ಆವರಣದಲ್ಲಿ ಹಸಿರು ಪರಿಸರವನ್ನು ಸೃಷ್ಟಿಸಿರುವುದು. ಇದೆಲ್ಲದರ ಜೊತೆಗೆ ಶಾಲೆಯ ಪ್ರವೇಶದ್ವಾರದಲ್ಲಿ ಮಹಾತ್ಮಾ ಗಾಂಧೀಜಿಯವರ ಸುಂದರವಾದ ಮೂರ್ತಿಯನ್ನು ಸ್ಥಾಪಿಸಿದ್ದಾರೆ. ಇವೆಲ್ಲ ಸೇರಿ ಆಹ್ಲಾದಕರ ಪರಿಸರವನ್ನು ಸೃಷ್ಟಿಸಿವೆ. ಇದೆಲ್ಲಕ್ಕಿಂತ ಹೆಚ್ಚಾಗಿ, ವಿಶೇಷ ಅಗತ್ಯವಿರುವ ಮಕ್ಕಳಿಗಾಗಿ ಸಂಪೂರ್ಣ ಬೇರೆಯದೇ ಆದ ಕೊಠಡಿಯೊಂದನ್ನು ವೈಯಕ್ತಿಕವಾಗಿ ಅವರು ನಿರ್ಮಿಸಿದ್ದು ಅದರಲ್ಲಿ ನವೀನ ವಿಧಾನದ ಬೋಧನೆ ಮತ್ತು ಕಲಿಕೆಯ ಸಾಮಗ್ರಿಗಳಿವೆ. ಇದು ಅಂತಹ ಮಕ್ಕಳ ಕುರಿತಾದ ಅವರ ಕಾಳಜಿಯನ್ನು ತೋರಿಸುತ್ತದೆ. ಅವರು ಚೈತನ್ಯಶಾಲಿ ಹಾಗೂ ತಮ್ಮ ವೃತ್ತಿಗೆ ತುಂಬಾ ಬದ್ಧರು (ಸ್ನಾತಕೋತ್ತರ ಪದವಿ ಪಡೆದಿದ್ದು ಸದ್ಯಕ್ಕೆ ಕನ್ನಡ ಸಾಹಿತ್ಯದಲ್ಲಿ ಪಿಎಚ್.ಡಿ. ಮಾಡುತ್ತಿದ್ದಾರೆ. ಶೈಕ್ಷಣಿಕ ಒಲವುಗಳನ್ನು ಹೊಂದಿರುವ ಕೆಲವೇ ಕೆಲವು ಶಿಕ್ಷಕರಲ್ಲಿ ಒಬ್ಬರು) ಎನ್ನುವುದರಲ್ಲಿ ಸಂದೇಹವಿರಲಿಲ್ಲ. ಆದರೆ ದೈಹಿಕ ಶಿಕ್ಷೆಯನ್ನು ಅವರು ನೀಡುತ್ತಿದ್ದರೇ ಎಂದು ಅನೌಪಚಾರಿಕವಾಗಿ ಪ್ರಶ್ನಿಸಿದಾಗ ಅವರೂ ಕೂಡ ಯಾವುದೇ ಹಿಂಜರಿಕೆಯಿಲ್ಲದೇ ತಾವು ಹಾಗೆ ಮಾಡುತ್ತಿದ್ದುದಾಗಿ ಒಪ್ಪಿಕೊಂಡರು!

ಶಿಕ್ಷಕರು ಮಕ್ಕಳ ಕೆನ್ನೆಗೆ ಏಟು ನೀಡಿದ ಅಥವಾ ಕಠೋರ ಶಬ್ದಗಳನ್ನು ಉಪಯೋಗಿಸಿ ಬಯ್ದ ಅದೆಷ್ಟೋ ಉದಾಹರಣೆಗಳು ಖಾಸಗಿ ಅಥವಾ ಸರ್ಕಾರಿ ಎನ್ನುವ ಭೇದಭಾವವಿಲ್ಲದೇ ಎಲ್ಲಾ ತರಹದ ಶಾಲೆಗಳಲ್ಲಿಯೂ ಕಂಡುಬಂದಿವೆ.

ದೈಹಿಕ ಶಿಕ್ಷೆಗಳನ್ನು ನೀಡುವುದರ ಹಿಂದಿನ ಸಮಾಜಶಾಸ್ತ್ರೀಯ ಆಧಾರ

ಕಳೆದ ಕೆಲವು ವಾರಗಳ ಅವಧಿಯಲ್ಲಿ ನಾನು ಒಡನಾಡಿದ ಮತ್ತು ನಡೆಸಿದ ಮಾತುಕತೆಗಳ ಪರಿಣಾಮವಾಗಿ ನನಗೆ ನಿರ್ದಿಷ್ಟವಾಗಿ ತಳಮಟ್ಟದಲ್ಲಿರುವ ಕಟುವಾಸ್ತವವು ಮನದಟ್ಟಾಯಿತು. ಆ ಕಾರಣ, ಶಿಕ್ಷಣತಜ್ಞರಾದ ಪ್ರೊ. ಕೃಷ್ಣಕುಮಾರ್ ಅವರು 2010ರಲ್ಲಿ ಅಂದರೆ, ಶಿಕ್ಷಣ ಹಕ್ಕು ಕಾಯಿದೆ ಸೆಕ್ಷನ್ 17ರ ಅಡಿಯಲ್ಲಿ ದೈಹಿಕ ಶಿಕ್ಷೆಯು ನಿಷೇಧಿಸಲ್ಪಟ್ಟ ಒಂದು ವರ್ಷದ ನಂತರ ಬರೆದ ಲೇಖನವೊಂದರ ಶೀರ್ಷಿಕೆಯು ನೆನಪಾಯಿತು. ಅವರು, 'ನಿಷೇಧವು ಕೇವಲ ಆರಂಭಿಕ ಹೆಜ್ಜೆಯಷ್ಟೇ. ಶಾಲೆಗಳಲ್ಲಿ ದೈಹಿಕ ಶಿಕ್ಷೆ ಇದ್ದೇ ಇರುತ್ತದೆ' ಎಂದು ಮೊದಲೇ ಎಚ್ಚರಿಕೆಯ ಮಾತನ್ನಾಡಿದ್ದರು. ಪ್ರೊ. ಕೃಷ್ಣಕುಮಾರ್ ಅವರು ಸಂಕ್ಷಿಪ್ತವಾಗಿ ಗುರುತಿಸಿರುವಂತೆ, ಶಿಕ್ಷಕರು ಮಕ್ಕಳ ಮೇಲೆ ಉಪಯೋಗಿಸುವ

ದೈಹಿಕ ಬಲವು ಪೋಷಕರು ಹಾಗೂ ಸಮುದಾಯವು ಅವರ ಮೇಲೆ ಹೊರಿಸಿರುವ ನೈತಿಕ ಅಧಿಕಾರದಲ್ಲಿ ಆಳವಾಗಿ ಬೇರೂರಿದೆ. ಹಾಗಾಗಿ ಪ್ರತೀ ಬಾರಿ ವಿದ್ಯಾರ್ಥಿಯೊಬ್ಬ ಶಿಕ್ಷಕರಿಂದ ಏಟು ತಿಂದಾಗಲೂ ಅವನು ಆ ಅಧಿಕಾರವನ್ನು ಮತ್ತಷ್ಟು ಬಲಗೊಳಿಸುತ್ತಿರುತ್ತಾನೆ ಎಂದರ್ಥ.

ನಮ್ಮ ದೇಶದಲ್ಲಿ ಆಳವಾಗಿ ಬೇರೂರಿದ ಸಾಮಾಜಿಕ ಪಿಡುಗುಗಳಲ್ಲಿ ಬಾಲ್ಯ ವಿವಾಹ ಮತ್ತು ಹೆಣ್ಣು ಶಿಶುಹತ್ಯೆಗಳು ಸುಮಾರು ಒಂದು ಶತಮಾನದಷ್ಟು ಹಿಂದೆಯೇ ಕಾನೂನಿನ ಪ್ರಕಾರ ನಿಷೇಧಿಸಲ್ಪಟ್ಟಿವೆ (ಈಗ ಹೆಣ್ಣು ಭ್ರೂಣಹತ್ಯೆಯ ರೂಪದಲ್ಲಿ ಅಸ್ತಿತ್ವದಲ್ಲಿದೆ). ಇವು ಈಗಲೂ ಒಳಗೊಳಗೇ ಅಲ್ಲಲ್ಲಿ ಆಚರಣೆಯಲ್ಲಿ ಉಳಿದುಕೊಂಡು ಬಂದಿವೆ. ಅದನ್ನು ನಡೆಸಿಕೊಂಡು ಹೋಗುವವರು ಖಂಡಿತವಾಗಿಯೂ ಅದನ್ನೊಂದು ಸಾಮಾಜಿಕ ಪಿಡುಗು ಎಂದು ಭಾವಿಸುವುದಿಲ್ಲ. ಇದು ಸಮಾಜ ಹಾಗೂ ಆಡಳಿತ ವ್ಯವಸ್ಥೆಗಳ ನಡುವೆ ಇರುವ ಕಂದಕವನ್ನು ಹಾಗೂ ಸಾಮಾಜಿಕವಾಗಿ ಒಪ್ಪಿತವಾದ ಪಿಡುಗುಗಳನ್ನು ತಡೆಗಟ್ಟುವ ವಿಷಯದಲ್ಲಿ ಸರ್ಕಾರದ ಇಚ್ಛೆಯು ನಡೆಯಲೇಬೇಕೆಂದಿಲ್ಲ ಎಂಬುದನ್ನು ನಮಗೆ ನೆನಪು ಮಾಡಿಕೊಡುತ್ತದೆ.

ದೈಹಿಕ ಶಿಕ್ಷೆಗೆ ಸಾಮಾಜಿಕ ಒಪ್ಪಿಗೆ ಇದೆ ಎನ್ನುವುದು ಬಹುತೇಕವಾಗಿ ತಿಳಿದಿರುವ ಸಂಗತಿ. ಬಾಲ್ಯದ ಅವಧಿಯಲ್ಲಿ ಕಲಿಕೆ ಮತ್ತು ಬೆಳವಣಿಗೆಗಳು ಹೇಗೆ ಉಂಟಾಗುತ್ತವೆ ಎನ್ನುವ ಕುರಿತಾಗಿ ಪುರಾತನ ಪರಿಕಲ್ಪನೆಯಿಂದ ಹೊಮ್ಮಿದ ಸಾಂಸ್ಕೃತಿಕ ಮನ್ನಣೆಯ ಹಿನ್ನೆಲೆ ಇದಕ್ಕಿದೆ. ಮಕ್ಕಳಿಗೆ ಏನೂ ತಿಳಿಯದು ಅಥವಾ ಅವರ ತಿಳುವಳಿಕೆ ಅತ್ಯಲ್ಪ ಪ್ರಮಾಣದ್ದು, ಹಾಗಾಗಿ ಅವರು ಭಾಷೆಯೂ ಸೇರಿದಂತೆ ಎಲ್ಲವನ್ನೂ ಕಲಿಯಲು ವಯಸ್ಕರನ್ನು ಅವಲಂಬಿಸುತ್ತಾರೆ ಎಂಬುದು ಸಾಮಾನ್ಯ ನಂಬಿಕೆ. ಮಕ್ಕಳು ತಪ್ಪುತಪ್ಪಾಗಿ ಕಲಿಯದಂತೆ ಹಾಗೂ ಅವರಿಂದ ತಪ್ಪುಗಳಾಗದಂತೆ ನೋಡಿಕೊಳ್ಳಲು ವಯಸ್ಕರು ನಿಗಾ ವಹಿಸಿ, ಆಗಿಂದಾಗ್ಗೆ ಮಧ್ಯಪ್ರವೇಶ ಮಾಡುವ ಅಗತ್ಯವಿದೆ. ಅದೂ ಅಲ್ಲದೆ ಮಗುವಿಗೆ ಕರ್ತೃತ್ವ ಶಕ್ತಿ ಅಥವಾ ಕಲಿಯಬೇಕು ಎನ್ನುವ ಬಯಕೆ ಸಹಜವಾಗಿ ಒಳಗಿನಿಂದ ಇರುವುದಿಲ್ಲ. ಅದಕ್ಕಾಗಿ ಮಗುವಿನ ಬೆಳವಣಿಗೆಯನ್ನು ಸರಿಯಾದ ಮಾರ್ಗದಲ್ಲಿ ರೂಪಿಸಲು, ಶಿಕ್ಷೆ ನೀಡಬಹುದಾದ ಪರಿಸರದಲ್ಲಿ ಶಿಸ್ತುಬದ್ಧ ಕ್ರಮವನ್ನು ಕೈಗೊಳ್ಳುವುದು ಅತ್ಯಂತ ಅಗತ್ಯ ಎಂದು ನಂಬಲಾಗಿದೆ.

'ಯಶಸ್ವಿ' ಶಿಕ್ಷಕರಾಗುವಲ್ಲಿನ ವಿಪರ್ಯಾಸ

ಮತ್ತೊಂದು ಆಳವಾಗಿ ಬೇರೂರಿದ ನಂಬಿಕೆಯೆಂದರೆ, ತಂದೆ ಮತ್ತು ಶಿಕ್ಷಕರ ಪಾತ್ರಗಳ ನಡುವೆ ಬಲವಾದ ಸಂಬಂಧವಿದೆ ಎನ್ನುವುದು. ಮಗುವಿನ

ವ್ಯಕ್ತಿತ್ವವನ್ನು ರೂಪಿಸುವ ತಂದೆಯ, ಸಾಂಪ್ರದಾಯಿಕ ಕಟ್ಟುನಿಟ್ಟಿನ ಪಾತ್ರವನ್ನು ಶಾಲೆಯಲ್ಲಿ ಶಿಕ್ಷಕರು ಅನುಕರಿಸುವುದೇ ಸರಿ ಎಂದು ಭಾವಿಸಲಾಗುತ್ತದೆ. ಪಿತೃಪ್ರಧಾನ ವ್ಯವಸ್ಥೆಯು ರೂಪಿಸಿದ ಶಿಕ್ಷಕಿಯರ ಸಾಮಾಜಿಕ ಅಸ್ತಿತ್ವದ ಸಂದರ್ಭದಲ್ಲಿಯೂ ಇದು ಅನ್ವಯಿಸುತ್ತದೆ. ಪುರುಷರಿಗೆ ಸಂಬಂಧಿಸಿದ ಪಾತ್ರ–ವರ್ತನೆಗೆ ಹೊಂದಿಕೊಳ್ಳುವಂತಿದ್ದಾಗ ಅವರು 'ಯಶಸ್ವಿ' ಶಿಕ್ಷಕರು ಎಂದು ಗುರುತಿಸಲ್ಪಡುತ್ತಾರೆ.

ಶಿಕ್ಷೆಗಳು ಸಾಧಾರಣವಾಗಿ ಶಾಲೆಯ ಸಾಂಸ್ಕೃತಿಕ ಮೌಲ್ಯಗಳ ಭಾಗವಾಗಿರುತ್ತವೆ. ಅವು ಒಂದೋ ನಿರೀಕ್ಷಿತ ವರ್ತನೆಗೆ ಮುಂಚಿತವಾಗಿಯೇ ತೋರಿದ ಪ್ರತಿಕ್ರಿಯೆ–ಗಳಾಗಿರುತ್ತವೆ ಅಥವಾ ಶಿಕ್ಷಕರು ಯಾವ ವರ್ತನೆಯನ್ನು ಅಸಹನೀಯ ಎಂದು ಪರಿಗಣಿಸುತ್ತಾರೋ ಅದಕ್ಕೆ ತೋರಿದ ಹರಿತ ಪ್ರತಿಕ್ರಿಯೆಯಾಗಿರುತ್ತವೆ. ಮೊದಲಿನ ರೀತಿಗೆ ಉದಾಹರಣೆಯೆಂದರೆ, ವಿರಾಮದ ಅವಧಿಯಲ್ಲಿ ಮುಖ್ಯೋಪಾಧ್ಯಾಯರು ಅಥವಾ ಹಿರಿಯ ಶಿಕ್ಷಕರು ಮೆಟ್ಟಿಲುಗಳನ್ನೇರುತ್ತಿರುವಾಗ ವಿದ್ಯಾರ್ಥಿಗಳು ದಡದಡನೆ ಜೋರಾಗಿ ಇಳಿದುಬಂದ ಕಾರಣ ಇನ್ನೇನು ಅವರು ಶಿಕ್ಷಕರಿಗೆ ತಾಕಿ, ಶಿಕ್ಷಕರು ಬಿದ್ದೇಬಿಡುತ್ತಿದ್ದರು ಎನ್ನುವ ಸನ್ನಿವೇಶದಲ್ಲಿ ಕೆಲವು ವಿದ್ಯಾರ್ಥಿಗಳಿಗೆ ಕೆನ್ನೆಗೆ ಏಟು ಕೊಡುವ ಸಾಧ್ಯತೆ. ವಿಶೇಷವಾಗಿ, ದೈಹಿಕ ಶಿಕ್ಷೆಯು ಆ ಶಾಲೆಯಲ್ಲಿ ಆಚರಣೆಯಲ್ಲಿದ್ದಾಗ ಇಂತಹ ಘಟನೆಗಳು ಸಂಭವಿಸುತ್ತವೆ. ಎರಡನೆಯ ರೀತಿಗೆ ಉದಾಹರಣೆಯೆಂದರೆ, ಮಕ್ಕಳು ಮಾತನಾಡುತ್ತಿದ್ದರು ಅಥವಾ ಎದುರುತ್ತರ ನೀಡಿದರು ಎಂಬ ಕಾರಣಕ್ಕಾಗಿ ಶಿಕ್ಷಕರು ಬಯ್ಗುಳ ಅಥವಾ ಏಟಿನ ಮೂಲಕ ಅವರಿಗೆ ನೋವುಂಟಾಗುವಂತೆ ಪ್ರತಿಕ್ರಿಯಿಸುವುದು. ಎರಡನೆಯ ಸನ್ನಿವೇಶದಲ್ಲಿ ಶಿಕ್ಷಕರು, ಮಕ್ಕಳು ಉಪಯೋಗಿಸುವ ಭಾಷೆಯು ಸರಿಯಾದದ್ದಲ್ಲವೆಂದು, ಅವಹೇಳನಕಾರಿಯೆಂದು ಭಾವಿಸುತ್ತಾರೆ. ಆದರೆ ಮಕ್ಕಳು ಬಳಸುವ ಭಾಷೆಯು ಅವರು ಮನೆಯಲ್ಲಿ ಮತ್ತು ನೆರೆಹೊರೆಯಲ್ಲಿ ನೋಡುವ, ಕೇಳುವ ಹಾಗೂ ಮಾಧ್ಯಮಗಳ ಮೂಲಕ ಕಲಿಯುವ ಭಾಷೆಯಾಗಿರುತ್ತದೆ ಎಂಬ ಸಂಗತಿಯನ್ನು ಅವರು ಅರಿತಿರುವುದಿಲ್ಲ, ಮಕ್ಕಳಿಗೆ ಪರ್ಯಾಯ ಮಾದರಿಯೊಂದನ್ನು ತೋರಿಸಿಕೊಡುವುದಿಲ್ಲ.

ಶಾಲೆಗಳಲ್ಲಿ ಕಂಡುಬಂದ ಗಾಬರಿಗೊಳಿಸುವ ಪ್ರವೃತ್ತಿಗಳು

ಸಂಸತ್ತು, 2007ರಲ್ಲಿ ಕಾಯಿದೆಯೊಂದನ್ನು ತರುವ ಮೂಲಕ ಮಕ್ಕಳ ಹಕ್ಕುಗಳ ರಕ್ಷಣೆ ಕುರಿತಾದ ರಾಷ್ಟ್ರೀಯ ಆಯೋಗ(ಎನ್‌ಸಿಪಿಸಿಆರ್)ವನ್ನು ಹುಟ್ಟುಹಾಕಿತು. ನಮ್ಮ ದೇಶದಲ್ಲಿನ ಮಕ್ಕಳ ಹಕ್ಕುಗಳನ್ನು ರಕ್ಷಿಸುವ, ಪ್ರೋತ್ಸಾಹಿಸುವ ಹಾಗೂ ಸಮರ್ಥಿಸುವ ಉದ್ದೇಶದಿಂದ, ವಿಶೇಷವಾಗಿ 'ಶಾಲೆಗಳಲ್ಲಿ ದೈಹಿಕ

ಶಿಕ್ಷೆಯನ್ನು ನಿರ್ಮೂಲನ ಮಾಡುವುದಕ್ಕಾಗಿ' (ಇದು ಶಾಲೆಗೆ ಹೋಗುವ ಮಕ್ಕಳ ನಿತ್ಯದ ವಾಸ್ತವಿಕ ಚಿತ್ರಣವನ್ನು ನೀಡುತ್ತದೆ) ಈ ಆಯೋಗವನ್ನು ಸ್ಥಾಪಿಲಾಯಿತು. 2009–10 ರಲ್ಲಿ ಈ ಆಯೋಗವು ಕೈಗೊಂಡ ಅಧ್ಯಯನವು ಕೆಲವು ಆಘಾತಕಾರಿ ಅಂಶಗಳನ್ನು ಹೊರಹಾಕಿತು.

- **ಮೊದಲನೆಯದಾಗಿ,** ಏಳು ರಾಜ್ಯಗಳಿಂದ ಒಟ್ಟು 6,632 ಮಕ್ಕಳ ಮಾದರಿಯನ್ನು ಕಲೆಹಾಕಲಾಗಿತ್ತು. ಅವರಲ್ಲಿ ಶೇ.99.86 ಮಕ್ಕಳು ಒಂದಲ್ಲ ಒಂದು ರೀತಿಯ ಶಿಕ್ಷೆಯನ್ನು ಅನುಭವಿಸಿದ್ದರು.
- **ಎರಡನೆಯದಾಗಿ,** ಮಕ್ಕಳು ರಾಜ್ಯ ಸರ್ಕಾರದ, ಕೇಂದ್ರ ಸರ್ಕಾರದ ಅಥವಾ ಖಾಸಗಿ ಶಾಲೆ ಹೀಗೆ ಯಾವುದೇ ಶಾಲೆಗಳಲ್ಲಿ ಓದುತ್ತಿದ್ದರೂ ಕೂಡ ಶಿಕ್ಷೆಗೆ ಒಳಪಡುವ ಅಪಾಯ ಒಂದೇ ತೆರನಾಗಿತ್ತು.
- **ಮೂರನೆಯದಾಗಿ,** ಎಷ್ಟು ಬಾರಿ ಶಿಕ್ಷೆಗೆ ಒಳಗಾಗುತ್ತಾರೆ ಎಂಬುದನ್ನು ನೋಡಿದಾಗ, ವಿವಿಧ ತರಹದ ಶಾಲೆಗಳಲ್ಲಿನ ಗಂಡು ಮತ್ತು ಹೆಣ್ಣುಮಕ್ಕಳ ಅನುಭವಗಳಲ್ಲಿ ಅಂತಹ ವ್ಯತ್ಯಾಸವೇನೂ ಕಂಡುಬರಲಿಲ್ಲ. ಅಧ್ಯಯನದ ವೇಳೆ ಒಂದೇ ದಿನದ ಅಂತರದಲ್ಲಿ ಶೇ. 14 ಗಂಡುಮಕ್ಕಳು ಹಾಗೂ ಶೇ. 10 ಹೆಣ್ಣುಮಕ್ಕಳು ಶಿಕ್ಷೆ ಅನುಭವಿಸಿದ್ದರು. ಶೇ. 20 ಗಂಡುಮಕ್ಕಳು ಹಾಗೂ ಶೇ. 18 ಹೆಣ್ಣುಮಕ್ಕಳು, ದತ್ತಾಂಶವನ್ನು ಸಂಗ್ರಹಿಸಿದ ವಾರದಲ್ಲಿಯೇ ಶಿಕ್ಷೆಯು ಮರುಕಳಿಸಿದುದನ್ನು ನೆನಪಿಸಿಕೊಂಡರು.
- **ನಾಲ್ಕನೆಯದಾಗಿ,** ಅನುಭವಿಸಿದ ಹಾಗೂ ಒಪ್ಪಿಕೊಂಡ ಎಲ್ಲಾ ತರಹದ ಶಿಕ್ಷೆಗಳ ಶ್ರೇಣೀವಾರು ಹಂಚಿಕೆಯು ತೋರಿಸುವ ಹಾಗೆ ಮಾತಿನ ಮೂಲಕ ಮಕ್ಕಳ ಒಳಮನಸ್ಸಿನ ಮೇಲೆ ದಾಳಿ ಮಾಡುವ ಶಿಕ್ಷೆಯ ರೀತಿಯು ಎಲ್ಲಕ್ಕಿಂತ ಮುಂಚೂಣಿ ಸ್ಥಾನದಲ್ಲಿದೆ.

ಶೇ. 81ರಷ್ಟು ಮಕ್ಕಳನ್ನು ಅವರಿಗೆ ಕಲಿಯುವ ಸಾಮರ್ಥ್ಯವೇ ಇಲ್ಲ ಎಂದು ಸಾರಾಸಗಟಾಗಿ ಹೇಳುವುದರ ಮೂಲಕ ತಿರಸ್ಕರಿಸಲಾಗಿತ್ತು. ನಂತರದ ನಾಲ್ಕು ಸ್ಥಾನಗಳನ್ನು ಆಕ್ರಮಿಸಿದ ಶಿಕ್ಷೆಗಳೆಂದರೆ, ಬೆತ್ತದ ಹೊಡೆತ, ಕೆನ್ನೆಗೆ ಏಟು, ಬೆನ್ನಿನ ಮೇಲೆ ಗುದ್ದುವುದು, ಕಿವಿ ಹಿಂಡುವುದು. ಇದರಲ್ಲಿ ನಾಲ್ಕು ಶಿಕ್ಷೆಗಳು, ಶಿಕ್ಷಕರು ತೆಗೆದುಕೊಂಡ ಕ್ರಮದಿಂದಾಗಿ ನೇರವಾಗಿ ನೋವನ್ನು ನೀಡುವಂತಹದ್ದಾಗಿವೆ. ಅತ್ಯಂತ ಕ್ರೂರ ರೂಪದಲ್ಲಿ ದೈಹಿಕ ಆಘಾತವನ್ನುಂಟುಮಾಡುತ್ತವೆ. ಆ ಮೂಲಕ ಮಗುವಿನ ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕೆ ತೀವ್ರ ಘಾಸಿಯನ್ನುಂಟುಮಾಡುತ್ತವೆ. ಚಿಕ್ಕ ಮಕ್ಕಳೂ ಕೂಡ ಏಕೆ ಇಂತಹ ಕಠಿಣ

ಶಿಕ್ಷೆಗಳಿಗೆ ಒಳಪಡುತ್ತಾರೆ ಎನ್ನುವುದಕ್ಕೆ ಹಲವಾರು ಕಾರಣಗಳಿವೆ. ಅದು 'ಶೈಕ್ಷಣಿಕ'ವಾಗಿರಬಹುದು (ಹೋಂವರ್ಕ್ ಮಾಡಿಲ್ಲ, ತರಗತಿಗೆ ನೋಟ್ ಪುಸ್ತಕ ತಂದಿಲ್ಲ ಅಥವಾ ಪ್ರಶ್ನೆಗೆ ಉತ್ತರಿಸಲು ಸಾಧ್ಯವಾಗಲಿಲ್ಲ). 'ಮಗುವಿಗೆ ಸಹಜವಾದ ವರ್ತನೆ ಮತ್ತು ಅಗತ್ಯವನ್ನು ವ್ಯಕ್ತಪಡಿಸಿದ್ದಕ್ಕಾಗಿ ಇರಬಹುದು' (ಮಾತನಾಡುವುದು, ಗುಟ್ಟಿನಲ್ಲಿ ತಿಂಡಿತಿನಿಸು ಸೇವಿಸುವುದು, ಶೌಚಾಲಯದಲ್ಲಿ ನಿಗದಿಪಡಿಸಿದ್ದಕ್ಕಿಂತ ಹೆಚ್ಚು ಸಮಯ ಕಳೆಯುವುದು) ಅಥವಾ 'ಶಾಲೆಯಲ್ಲಿನ ಕ್ರಮಬದ್ಧತೆಯನ್ನು ಅಸ್ತವ್ಯಸ್ತಗೊಳಿಸುವುದು' (ಸೂಕ್ತ ಸಮವಸ್ತ್ರವನ್ನು ಧರಿಸದೇ ಇರುವುದು, ಶಿಕ್ಷಕರು ಹೇಳಿದ ಸಾಮಗ್ರಿಗಳನ್ನು ತರದೇ ಇರುವುದು ಅಥವಾ ಬೆಳಗಿನ ಪ್ರಾರ್ಥನೆ ಮುಗಿದ ನಂತರ ತರಗತಿಗೆ ತಡವಾಗಿ ತಲುಪುವುದು) ಕೇವಲ 'ನಿರಂಕುಶ' ಅಥವಾ ವಿಲಕ್ಷಣ ಸ್ವಭಾವವೂ ಇರಬಹುದು (ಶಿಕ್ಷಕರಿಗೆ ಸಿಟ್ಟು ಬಂದಾಗ ಅಥವಾ ಯಾವುದೇ ಕಾರಣವಿಲ್ಲದಿದ್ದಾಗಲೂ ಹೊಡೆಯುವುದು).

ಮಕ್ಕಳನ್ನು ಸಂತೋಷವಾಗಿಡುವುದರ ಹಿಂದಿನ ಆಳವಾದ ತಾರ್ಕಿಕ ವಿವರಣೆ

ಈ 'ಭಯ ತುಂಬಿದ ವಾತಾವರಣ'ದ ಪರಿಣಾಮ ಹಾಗೂ ಒತ್ತಡಗಳು ದೀರ್ಘಕಾಲದಲ್ಲಿ ತುಂಬಾ ತೀವ್ರವಾಗುತ್ತವೆ ಎನ್ನುವುದನ್ನು ಒತ್ತಿ ಹೇಳುವ ಅಗತ್ಯ ಇಲ್ಲ. ಶಿಕ್ಷಣಶಾಸ್ತ್ರಜ್ಞೆ ಹಾಗೂ ಮಕ್ಕಳ ಮನಃಶಾಸ್ತ್ರಜ್ಞೆಯಾದ ಕಮಲಾ.ವಿ.ಮುಕುಂದ ಅವರು ಮಗುವಿನ ಕಲಿಕೆಯ ಮೇಲೆ ಅತ್ಯಂತ ಉತ್ತಮ ರೀತಿಯಲ್ಲಿ ಸಂಶೋಧನೆ ಮಾಡಿ, 'ನೀನಿವತ್ತು ಶಾಲೆಯಲ್ಲಿ ಏನನ್ನು ಕೇಳಿದೆ?' ಎಂಬ ಪುಸ್ತಕವನ್ನು ಬರೆದಿದ್ದಾರೆ. ಈ ಪುಸ್ತಕದಲ್ಲಿ ಅವರು, ಶೈಕ್ಷಣಿಕ ಪರಿಸರದಲ್ಲಿ ವಿದ್ಯಾರ್ಥಿಗಳು ಅನುಭವಿಸುವ ಭಾವನೆಗಳು ವಿದ್ಯಾರ್ಥಿಗಳ ಪ್ರೇರಣೆ, ಉತ್ತೇಜನ, ಸಂವೇದನೆ, ಸಾಧನೆ, ದೈಹಿಕ ಹಾಗೂ ಮಾನಸಿಕ ಆರೋಗ್ಯದಂತಹ ಹಲವಾರು ಅಂಶಗಳನ್ನು ಪ್ರಭಾವಿಸುತ್ತವೆ ಎನ್ನುವುದರ ಮೇಲೆ ಬೆಳಕು ಚೆಲ್ಲುತ್ತಾರೆ. ವಿದ್ಯಾರ್ಥಿಯೊಬ್ಬ ಸಂತೋಷವಾಗಿಲ್ಲದಿದ್ದರೆ, ಚಿಂತೆಗೀಡಾಗಿದ್ದರೆ, ಕೋಪಗೊಂಡಿದ್ದರೆ ಕಲಿಸುವ ಪಾಠದಲ್ಲಿನ ಬಹಳಷ್ಟನ್ನು ಅರ್ಥಮಾಡಿಕೊಳ್ಳಲಾರ.

ಹೋಂವರ್ಕ್ ಮಾಡದೆ ಇರುವುದಕ್ಕೆ ಕಾಡುವ ಶಿಕ್ಷೆಯ ಭಯವು ಶಾಲಾಮಕ್ಕಳ ಒತ್ತಡದ ಪ್ರಮುಖ ಮೂಲ; ಶಾಲಾ ಶಿಕ್ಷಣವು ಕಲಿಕೆ ಮತ್ತು ಸಕಾರಾತ್ಮಕವಾದ ಭಾವನಾತ್ಮಕ ಅನುಭವಗಳನ್ನು ಒದಗಿಸುವುದರ ನಡುವೆ ಸಮತೋಲನವನ್ನು ಸಾಧಿಸುವ ಅಗತ್ಯವಿದೆ ಎಂಬುದರ ಕಡೆಗೆ ಕಮಲಾ ಮುಕುಂದ ಅವರು ನಮ್ಮ ಗಮನವನ್ನು ಸೆಳೆಯುತ್ತಾರೆ. ಒತ್ತಡವು ದೇಹ ಹಾಗೂ ಮೆದುಳಿಗೆ ಒಳ್ಳೆಯದಲ್ಲ, ಅಂತೆಯೇ ಶೈಕ್ಷಣಿಕ ಸಾಧನೆಗೂ ಅದು ಹಾನಿಕಾರಕ

ಎಂಬ ಸ್ಪಷ್ಟ ತೀರ್ಮಾನಕ್ಕೆ ಬರುತ್ತಾರೆ. ಏಕೆಂದರೆ, ಬೆಳವಣಿಗೆ ಹೊಂದುತ್ತಿರುವ ಮೆದುಳಿನ ಮೇಲೆ ನಡೆಸಿದ ಸಂಶೋಧನೆಯ ಪ್ರಕಾರ, ಒತ್ತಡ ಹಾಗೂ ಅದರಿಂದ ಹೆಚ್ಚುವ ಕಾರ್ಟಿಸೋಲ್‌ನ ಮಟ್ಟವು ವಾಸ್ತವದಲ್ಲಿ ಹಿಪ್ಪೋಕ್ಯಾಂಪಸ್‌ನಲ್ಲಿರುವ (ಮೆದುಳಿನ ಮಧ್ಯಭಾಗದಲ್ಲಿರುವ, ಹೊಸ ನೆನಪುಗಳನ್ನು ಸೃಷ್ಟಿಸಲು ಕಾರಣವಾದ ಸಣ್ಣ ರಚನೆ) ಬಹುಮುಖ್ಯ ನರತಂತುಗಳನ್ನು (ನ್ಯೂರಾನ್) ನಾಶಪಡಿಸುತ್ತದೆ. ಆ ಮೂಲಕ ಅನೇಕ ವರ್ಷಗಳ ನಂತರವೂ ಅದು ನೆನಪು ಮತ್ತು ಕಲಿಕೆಯ ಸಾಮರ್ಥ್ಯವನ್ನು ಊನಗೊಳಿಸಬಹುದು.

ಬಾಲ್ಯವೆಂದರೆ ಸಂತೋಷ ಹಾಗೂ ಆರೋಗ್ಯದಿಂದ ಕೂಡಿರಬೇಕು. ಆದರೆ ಕೆಲವು ಶೈಕ್ಷಣಿಕ ಸನ್ನಿವೇಶಗಳ ಜೊತೆಗೆ ಕಠೋರ ಶಿಸ್ತು ಅಥವಾ ಸಮಸ್ಯಾತ್ಮಕ ಸಂಬಂಧಗಳಂತಹ ಕೌಟುಂಬಿಕ ಸಂಕಷ್ಟಗಳು, ದೈಹಿಕ ಶಿಕ್ಷೆ, ಸ್ಪರ್ಧಾತ್ಮಕ ತರಗತಿ, ಪರಿಸರ ಮತ್ತು ನಿರಂತರವಾಗಿ ಇತರ ಸಹಪಾಠಿಗಳೊಂದಿಗೆ ಹೋಲಿಸಿ ನೋಡುವ ಮೌಲ್ಯಮಾಪನಗಳಂತಹ ಶಾಲಾ ಆಚರಣೆಗಳು ಬಾಲ್ಯದ ಹಳಿ ತಪ್ಪಿಸುತ್ತವೆ. ಆದ್ದರಿಂದ, ವಿದ್ಯಾರ್ಥಿಗಳ ಶೈಕ್ಷಣಿಕ ಕಲಿಕೆಗೆ ಕೊಡುವಷ್ಟೇ ಪ್ರಾಮುಖ್ಯತೆಯನ್ನು ಅವರ ಭಾವನಾತ್ಮಕ ಸ್ಥಿತಿಗೂ ಕೊಡಬೇಕೆಂಬ ಸಮಂಜಸ ವಾದವನ್ನು ಕಮಲಾ ಮುಕುಂದ ಮುಂದಿಡುತ್ತಾರೆ. ಮಕ್ಕಳು ಸಂತೋಷವಾಗಿರುವುದರಿಂದ ಅಂತಿಮ ಪರೀಕ್ಷೆಯಲ್ಲಿ ಹೆಚ್ಚಿನ ಅಂಕಗಳು ಬರುತ್ತವೆ ಎಂಬ ಕಾರಣದಿಂದಲ್ಲ, ಬದಲಿಗೆ ಮಕ್ಕಳನ್ನು ಶಾಲೆಯಲ್ಲಿ ಸಂತೋಷವಾಗಿಡಬೇಕೆಂಬ ಗುರಿಯತ್ತಲೇ ನಮ್ಮೆಲ್ಲ ಗಮನವನ್ನೂ ಕೇಂದ್ರೀಕರಿಸಬೇಕು ಎಂದು ಅವರು ಹೇಳುತ್ತಾರೆ.

ದೀರ್ಘಕಾಲೀನ ಹೋರಾಟ ಜಾರಿಯಲ್ಲಿದೆ

ಕೊನೆಯದಾಗಿ ಹೇಳಬೇಕೆಂದರೆ, ದೈಹಿಕ ಶಿಕ್ಷೆಯನ್ನು ಕಾನೂನಿನ ಪ್ರಕಾರ ನಿಷೇಧಿಸುವುದು ದೀರ್ಘಕಾಲೀನ ಸಾಮಾಜಿಕ ಹೋರಾಟದ ಆರಂಭವಷ್ಟೇ. ಇದಕ್ಕೆ ಎರಡು ಕಾರಣಗಳಿವೆ. ಒಂದು, ಶಿಕ್ಷಕರ ವೃತ್ತಿಗಿರುವ ಕನಿಷ್ಠ ಮಟ್ಟದ ಸ್ಥಾನ–ಮಾನ. ಎರಡು, ಸೇವಾಪೂರ್ವ ಮತ್ತು ಸೇವಾನಿರತ ಕಾರ್ಯಕ್ರಮಗಳ ಮೂಲಕ ತಮ್ಮ ಬೆಳವಣಿಗೆಯನ್ನು ಸಾಧಿಸಲು ಶಿಕ್ಷಕರಿಗಿರುವ ಕಡಿಮೆ ಗುಣಮಟ್ಟದ ಅವಕಾಶಗಳು. ಪರೀಕ್ಷೆಗಳಲ್ಲಿ ಮಕ್ಕಳು ಚೆನ್ನಾಗಿ ಸಾಧನೆ ಮಾಡುವ ನಿಟ್ಟಿನಲ್ಲಿ ಅವರನ್ನು ಸಿದ್ಧಗೊಳಿಸಬೇಕಾದ ಶಿಕ್ಷಕರು ತೀವ್ರ ಒತ್ತಡಕ್ಕೆ ಒಳಗಾಗುತ್ತಾರೆ. ಇದು ಅವರನ್ನು ಶಿಕ್ಷೆ ನೀಡುವಂತೆ ಮಾಡುತ್ತದೆ ಎನ್ನುವುದರಲ್ಲಿ ಸಂದೇಹವಿಲ್ಲ. ಮಗುಸ್ನೇಹಿಯಲ್ಲದ ಇಂತಹ ಆಚರಣೆಗಳಿಗೆ ಸಮಾಜವು ಸುಪ್ತವಾಗಿ ನೀಡುವ ಒಪ್ಪಿಗೆಯು ಸಮಸ್ಯೆಯನ್ನು ಇನ್ನಷ್ಟು ಜಟಿಲಗೊಳಿಸುತ್ತದೆ.

ನಮ್ಮ ಸಂವಿಧಾನದ ಆಶೋತ್ತರಗಳು ಕನಸುಗಳಾಗಿಯೇ ಉಳಿದುಬಿಡಬಾರದು

ದೀರ್ಘಕಾಲೀನ ಪರಿಹಾರವು ಬಹುಶಃ ಎರಡು ವಿಧದ ಕಾರ್ಯತಂತ್ರಗಳನ್ನು ಅವಲಂಬಿಸಿರುತ್ತದೆ.

ಮೊದಲನೆಯದಾಗಿ, ಕಾರ್ಯಾಗಾರಗಳು ಮತ್ತು ಇನ್ನಿತರ ವಿಧಾನಗಳಲ್ಲಿ ವಯಸ್ಕರಿಗೆ ಅನ್ವಯಿಸುವ ಸಿದ್ಧಾಂತಗಳನ್ನು ಬಳಸಿ ಶಿಕ್ಷಕರಿಗಾಗಿ ದೃಷ್ಟಿಕೋನ ನಿರ್ಮಾಣ ಅಧಿವೇಶನಗಳನ್ನು ಕುಶಲತೆಯಿಂದ ರೂಪಿಸುವುದು. ಹೆಚ್ಚಿನ ಸಂದರ್ಭಗಳಲ್ಲಿ ಶಿಕ್ಷಕರ ನಿಜಜೀವನದ ದ್ವಂದ್ವ ಹಾಗೂ ಹತಾಶೆಗಳು ಮೇಲಿನ ಸ್ತರಕ್ಕೆ ಬಾರದೆ ಆಳದಲ್ಲಿಯೇ ಉಳಿದುಬಿಡುತ್ತವೆ. ಮಕ್ಕಳ ಶೈಕ್ಷಣಿಕ ಸಾಧನೆಯಲ್ಲಿನ ಕೊರತೆಗೆ ಸಮರ್ಥನೆಯಾಗಿ ಬಳಕೆಯಾಗುತ್ತವೆ. ಇವುಗಳ ಸುತ್ತ ಚರ್ಚೆ ನಡೆಯಬೇಕಾಗಿರುವುದು ಮುಖ್ಯ. ಅದಕ್ಕೆ ಆಧಾರವಾಗಿರುವ ಶಿಕ್ಷಕರ ಕಲ್ಪನೆಗಳನ್ನು ಕೆಲವು ಮಹತ್ವದ ಪ್ರಶ್ನೆಗಳೊಂದಿಗೆ ಮೇಳೈಸಬೇಕು. ಅವರೊಳಗೇ ಚರ್ಚೆ ನಡೆದು ಆಳವಾದ ಪರ್ಯಾಲೋಚನೆಗಳು ಹೊರಹೊಮ್ಮುವಂತೆ ಅನುಕೂಲಿಸಬೇಕು.

ಎರಡನೆಯದಾಗಿ, ಮಕ್ಕಳ ಮೂಲಭೂತ ಘನತೆಯ ಹಕ್ಕಿನ ಕುರಿತಾಗಿ ಪೋಷಕರು ಮತ್ತು ಸಮುದಾಯದ ಸದಸ್ಯರಲ್ಲಿ ಅರಿವು ಮೂಡಿಸಲು ಹಾಗೂ ದೈಹಿಕ ಶಿಕ್ಷೆಯನ್ನು ಸುಪ್ತವಾಗಿ ಒಪ್ಪುವುದರ ದುಷ್ಪರಿಣಾಮಗಳ ಮೇಲೆ ಬೆಳಕು ಚೆಲ್ಲಲು ವ್ಯವಸ್ಥಿತ ರೀತಿಯಲ್ಲಿ ಪ್ರಚಾರಾಂದೋಲನಗಳನ್ನು ಹಮ್ಮಿಕೊಳ್ಳುವುದು. ನಾವು ಒಟ್ಟಾರೆ ಒಂದು ಸಮಾಜವಾಗಿ ಇದನ್ನು ಶ್ರದ್ಧೆಯಿಂದ ಕೈಗೆತ್ತಿಕೊಳ್ಳದಿದ್ದರೆ, ನಮ್ಮ ಸಂವಿಧಾನದಲ್ಲಿ ಸೇರ್ಪಡೆಯಾದ ಅನುಚ್ಛೇದ 39(ಇ)– 'ಮಕ್ಕಳ ಎಳೆಯ ವಯಸ್ಸು ಶೋಷಣೆಗೊಳಗಾಗದಂತೆ ರಾಜ್ಯಾಡಳಿತವು ಹಂತಹಂತವಾಗಿ ಕೆಲಸ ಮಾಡುತ್ತಲೇ ಹೋಗಬೇಕು' ಹಾಗೂ ಅನುಚ್ಛೇದ 39(ಎಫ್)– 'ಮಕ್ಕಳು ಆರೋಗ್ಯಕರ ರೀತಿಯಲ್ಲಿ ಮತ್ತು ಸ್ವತಂತ್ರವಾದ, ಘನತೆಯಿಂದ ಕೂಡಿದ ಸ್ಥಿತಿಯಲ್ಲಿ ಬೆಳವಣಿಗೆ ಹೊಂದುವ ಹಾಗೆ ರಾಜ್ಯಾಡಳಿತವು ಅವಕಾಶ ಮತ್ತು ಸೌಲಭ್ಯಗಳನ್ನು ಹಂತಹಂತವಾಗಿ ಒದಗಿಸಬೇಕು...' –ಇವುಗಳ ಆಶೋತ್ತರಗಳು ಕನಸುಗಳಾಗಿಯೇ ಉಳಿದುಬಿಡುತ್ತವೆ.

■

ಬಿ ಫಸ್ಟ್, 19–09–2016